# ಜಾನಪದ ರಂಗಭೂಮಿಯಲ್ಲಿ ಬಯಲಾಟ ಪ್ರದರ್ಶನ ಕಲೆಯ ಸವಾಲುಗಳು ಮತ್ತು ಸಾಧ್ಯತೆಗಳು

**ಅಣ್ಣಾಜಿ ಕೃಷ್ಣಾರೆಡ್ಡಿ***

**DOI: https://doi.org/10.5281/zenodo.22107118**

**ABSTRACT**

ಗ್ರಾಮೀಣ ಶ್ರಮ ಸಂಸ್ಕೃತಿಯ ಜೀವಂತ ಪ್ರತೀಕವಾದ ಮೂಡಲಪಾಯ ಬಯಲಾಟವು ಕೇವಲ ಮನರಂಜನೆಯಲ್ಲದೆ, ಸಮುದಾಯಗಳ ನಡುವಿನ ಸಾಮರಸ್ಯದ ಪ್ರಮುಖ ಕೊಂಡಿಯಾಗಿದೆ. ಬಳ್ಳಾರಿ ಜಿಲ್ಲೆಯಂತಹ ಬಯಲುಸೀಮೆಯಲ್ಲಿ ಪ್ರವರ್ಧಮಾನಕ್ಕೆ ಬಂದ ಈ ಕಲೆಯು, ಅನಕ್ಷರಸ್ಥ ಕಲಾವಿದರ ಅದ್ಭುತ ಸ್ಮರಣಶಕ್ತಿ ಮತ್ತು ಕಲಾಬದ್ಧತೆಯಿಂದ ತಲೆಮಾರುಗಳನ್ನು ದಾಟಿಬಂದಿದೆ. ಆದರೆ, ಪ್ರಸ್ತುತ ಆರ್ಥಿಕ ಮುಗ್ಗಟ್ಟು, ಸೂಕ್ತ ತರಬೇತುದಾರರ ಕೊರತೆ, ಜಾತಿ ವ್ಯವಸ್ಥೆಯ ಮಿತಿಗಳು, ಯುವಜನರ ನಿರಾಸಕ್ತಿ ಹಾಗೂ ಆಧುನಿಕ ದೃಶ್ಯ ಮಾಧ್ಯಮಗಳ ಅಬ್ಬರದಿಂದಾಗಿ ಈ ವಿಶಿಷ್ಟ ರಂಗಭೂಮಿ ಅಳಿವಿನಂಚಿನಲ್ಲಿದೆ. ಕರಾವಳಿಯ ಯಕ್ಷಗಾನ ಪಡೆದುಕೊಂಡ ಬೆಂಬಲದ ಮಾದರಿಯಲ್ಲಿಯೇ ಬಯಲಾಟಕ್ಕೂ ಕಾಯಕಲ್ಪದ ತುರ್ತು ಅವಶ್ಯಕತೆಯಿದೆ. ಸ್ತ್ರೀಯರಿಗೆ ಹೆಚ್ಚಿನ ರಂಗಾವಕಾಶ ನೀಡುವುದು, ಮೂರು ಗಂಟೆಗಳ ಕಾಲಮಿತಿಯೊಳಗೆ ಪ್ರದರ್ಶನವನ್ನು ಅಚ್ಚುಕಟ್ಟಾಗಿ ರೂಪಿಸುವುದು, ಸಮಕಾಲೀನ ಹೊಸ ಕಥಾವಸ್ತುಗಳನ್ನು ಪ್ರಯೋಗಿಸುವುದು ಮತ್ತು ಸರ್ಕಾರದ ಸಕ್ರಿಯ ಆರ್ಥಿಕ ಬೆಂಬಲದೊಂದಿಗೆ ಈ ದೇಶೀಯ ಕಲೆಯನ್ನು ಭವಿಷ್ಯದ ಪೀಳಿಗೆಗೆ ಸಮರ್ಥವಾಗಿ ದಾಟಿಸಬಹುದಾಗಿದೆ.

**KEYWORDS:** ಮೂಡಲಪಾಯ ಬಯಲಾಟ, ಜಾನಪದ ರಂಗಭೂಮಿ, ಶ್ರಮ ಸಂಸ್ಕೃತಿ, ಸಾಂಸ್ಕೃತಿಕ ಸವಾಲುಗಳು, ದೇಶೀಯ ಕಲೆ.

* **ಡಾ. ಅಣ್ಣಾಜಿ ಕೃಷ್ಣಾರೆಡ್ಡಿ,** ಅತಿಥಿ ಉಪನ್ಯಾಸಕರು, ಪ್ರದರ್ಶನ ಕಲೆ ಮತ್ತು ನಾಟಕ ವಿಭಾಗ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿ.

ಜನಪದ ಪರಂಪರೆಯ ಪ್ರದರ್ಶಕ ಕಲೆಯಾದ ಈ ಬಯಲಾಟಗಳು ಕೇವಲ ಮನರಂಜನೆಯ ಸಾಧನಗಳಾಗಿರದೇ ಗ್ರಾಮೀಣ ಪ್ರದೇಶಗಳ ಶ್ರಮ ಸಂಸ್ಕೃತಿಯ ಪ್ರತೀಕವಾಗಿವೆ. ಶ್ರಮದಾಯಕವಾದ ಕೃಷಿ ಬದುಕನ್ನೇ ಒಂದು ಕಲಾಪ್ರಕಾರವಾಗಿ ಗ್ರಾಮೀಣ ಜನಪದರು ರೂಪಿಸಿದ್ದಾರೆ. ಬಹುತೇಕ ದುಡಿಯುವ ಜನರು ಕಟ್ಟಿ ಬೆಳೆಸಿದ ಈ ಬಯಲಾಟ ಕಲಾಮಾಧ್ಯಮವು ಎಲ್ಲಾ ಜಾತಿ ಧರ್ಮ ವರ್ಗದ ಜನರ ಸಹಭಾಗಿತ್ವದಲ್ಲಿ ನಿರ್ಮಿತಿಯಾಗಿದ್ದು ನಿಜವಾದ ಅರ್ಥದಲ್ಲಿ ಗ್ರಾಮಗ್ರಾಮಗಳಲ್ಲಿ ಸಾಮರಸ್ಯ ಹಾಗೂ ಸೌಹಾರ್ದತೆಯ ದ್ಯೋತಕವಾಗಿವೆ. ಬದುಕಿಗಾಗಿ ಕೃಷಿ ಹಾಗೂ ಮನೋರಂಜನೆಗಾಗಿ ಬಯಲಾಟವನ್ನು ಶತಮಾನಗಳಿಂದ ರೂಢಿಸಿಕೊಂಡು ಬಂದ ಅನಕ್ಷರಸ್ಥ ಜನಪದ ಕಲಾವಿದರು ಬಯಲಾಟ ಕಲಾಪ್ರಕಾರದ ಮೂಲಕ ಈ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಗೆ ಬಹುದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ. ಭಾರತವು ವಿವಿಧ ಪ್ರಕಾರದ ಸಂಗೀತ, ನೃತ್ಯ, ರಂಗಭೂಮಿ ಮತ್ತು ವೈವಿಧ್ಯಮಯ ಪ್ರದರ್ಶನ ಮತ್ತು ಸಮೂಹ ಕಲೆಗಳಿಗೆ ಮೂಲ ನೆಲೆಯಾಗಿದೆ. ಪ್ರಪಂಚದ ಯಾವುದೇ ದೇಶವು ಸಂಗೀತ, ವಾದ್ಯಗಳು, ವೇಷಭೂಷಣಗಳು, ಪ್ರಸಾಧನ, ನೃತ್ಯ ಮತ್ತು ರಂಗಭೂಮಿ ಕಲೆಗಳಲ್ಲಿ ಭಾರತಕ್ಕಿಂತ ಹೆಚ್ಚಿನ ವೈವಿಧ್ಯಮಯ ರೂಪಗಳನ್ನು ಹೊಂದಿಲ್ಲ. ವಿಶಿಷ್ಟವಾದ ರಂಗಭೂಮಿ ಕಲಾ ಪ್ರಕಾರಗಳಲ್ಲಿ ಒಂದಾದ ಮೂಡಲಪಾಯದ ದೊಡ್ಡಾಟ ಅಥವಾ ಬಯಲಾಟವು ಬಳ್ಳಾರಿ ಜಿಲ್ಲೆಯಲ್ಲಿ ಹುಟ್ಟಿಕೊಂಡಿದೆ, ಸಾಮಾನ್ಯವಾಗಿ ಬಯಲಾಟ ಎಂದು ಕರೆಯಲಾಗುತ್ತದೆ. ಆದರೆ ಈ ರಂಗಭೂಮಿಯಲ್ಲಿ ಉತ್ತರಾದಿ ಮತ್ತು ದಕ್ಷಿಣಾದಿ ಸಂಗೀತ ಪ್ರಕಾರಗಳಿವೆ. ಇದು ಗುಂಪು ಪ್ರದರ್ಶನ ಕಲೆಯಾಗಿದೆ. ಭಾರತೀಯ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ, ಭಾಗವತ ಮತ್ತು ಪುರಾಣಗಳಿಂದ ಕೂಡಿದ ಕಥಾ ಪ್ರಸಂಗಗಳು ಕಂಡು ಬರುತ್ತವೆ.

**ಕಥಾಪ್ರಸಂಗ:**

ಕರ್ನಾಟಕಕ್ಕೆ ಇಂತಹ ಪಾರಂಪರಿಕವಾದ ಬಳುವಳಿಯಾಗಿ ಸಂಪ್ರದಾಯದ ಒಂದು ಸಂಸ್ಕೃತಿಯಿದೆ. ಅದು ಮೂಲತಃ ದ್ರಾವಿಡ ಸಂಸ್ಕೃತಿ. ಕಾಲಕ್ರಮೇಣ ಆರ್ಯ ಸಂಸ್ಕೃತಿಯ ಪ್ರಭಾವ ಇದರ ಮೇಲಾಗಿ ಎಷ್ಟೇ ಶಿಷ್ಟತೆ ಹಾಗೂ ಸಂಕೀರ್ಣತೆಗೆ ಒಳಗಾಗಿದ್ದರೂ ಈ ಸಂಸ್ಕೃತಿಗೆ ಅದರದೇ ಆದ ಬೇರಿದೆ. ಈ ದೃಷ್ಟಿಯಿಂದ ದ್ರಾವಿಡ ಜನಾಂಗದವರಿಗೆ ಸಮಾನವಾಗಿರುವ ಸಾಹಿತ್ಯ, ಧರ್ಮ, ಕಲೆ, ಸಂಗೀತ, ಶಿಲ್ಪ ಹಾಗೂ ನಾಟ್ಯಪದ್ಧತಿಗಳು ಇಲ್ಲಿ ಹಿಂದಿನಿಂದಲೂ ಉಳಿದು ಬಂದಿವೆ. ದ್ರಾವಿಡರ ಮೂಲಕವಾಗಿ ಕನ್ನಡ ನಾಡಿನಲ್ಲಿ ಉಳಿದುಬಂದಿರುವ ದೇಶೀಯ ಕಲೆಯ ಪ್ರಕಾರಗಳಲ್ಲಿ ಜಾನಪದ ರಂಗಭೂಮಿಯೂ ಒಂದು. ಬಯಲಾಟಗಳು ಈ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ.

- ಕನ್ನಡ ಜನಪದ ರಂಗಭೂಮಿಯ ಭಾಗವಾಗಿರುವ ಬಯಲಾಟ ಇದೊಂದು ದೃಶ್ಯಕಲೆ. ಅಭಿನಯದ ಮೂಲಕ ಸಾಗುವ ಕಲೆ ಆಗಿದೆ. ಉಳಿದ ಸಾಹಿತ್ಯ ಪ್ರಕಾರದಂತೆ ಕೇವಲ ಕೇಳಿ ತಿಳಿಯುವಂತಹದ್ದಲ್ಲ. ಗದ್ಯ–ಪದ್ಯಗಳಿಂದ ಕೂಡಿದ ಮಿಶ್ರಸಾಹಿತ್ಯ ಪ್ರಕಾರ ಇದಾಗಿದೆ. ಗಾಯನ, ಜೊತೆಗೆ ವಾದ್ಯಗಳ ಲಯಬದ್ಧ ಸಂಯೋಜನೆಗಳ ಮೂಲಕ ಜೀವ ತುಂಬುತ್ತಾರೆ. ನೃತ್ಯ, ನಟನೆ, ಸುಧಾರಣೆ, ಅಭಿವ್ಯಕ್ತಿಗಳು, ಸಂಭಾಷಣೆಗಳು, ಪಾಂಡಿತ್ಯಪೂರ್ಣ ಚರ್ಚೆಗಳು, ವಿಶಿಷ್ಟ ವೇಷಭೂಷಣಗಳು ಮತ್ತು ಪ್ರಸಾಧನಗಳೊಂದಿಗೆ ಹಾಸ್ಯ. ಬಯಲಾಟದಲ್ಲಿ ಕಳೆದ 200 ವರ್ಷಗಳಿಂದ ರೂಢಿಯಲ್ಲಿದೆ.
- ಬಳ್ಳಾರಿ ಜಿಲ್ಲೆಯ ಯಾವ ಹಳ್ಳಿಗೆ ಹೋದರೂ ಬಯಲಾಟದ ಸೊಗಡು ಸಿಕ್ಕೇ ಸಿಗುತ್ತದೆ.

ಬಯಲಾಟದ ತವರೂರು ಈ ಜಿಲ್ಲೆ. ಅಕ್ಷರ ಕಲಿಯದವರೇ ಸಂರಕ್ಷಿಸಿ, ಬೆಳೆಸಿ, ಪೊರೆದ ಕಲೆಯಿದು. ಬಾಲ್ಯದಿಂದಲೇ ಬಯಲಾಟದ ತಾಲೀಮುಗಳನ್ನು ನೋಡುತ್ತಾ ಸಾವಿರಾರು ಪದಗಳನ್ನು ಕರಗತ ಮಾಡಿಕೊಳ್ಳುತ್ತಾ ಬರುವ ಸಂಪ್ರದಾಯ ಇಲ್ಲಿದೆ. ಎಷ್ಟೋ ಪ್ರಸಂಗಗಳ ಹಸ್ತಪ್ರತಿಗಳು ಇಲ್ಲದಿದ್ದರೂ ಪೀಳಿಗೆಯಿಂದ ಪೀಳಿಗೆಗೆ ಅವುಗಳು ದಾಟಿಕೊಂಡು ಬಂದಿರುವ ಪರಿ ಅನನ್ಯ. ಬಯಲಾಟದ ಪ್ರಮುಖ ಕವಿ ಕುಡುತಿನಿಯ ಭೀಮೇಶನಾಗಿದ್ದಾನೆ. ಆದರೂ ಕರ್ನಾಟಕದಲ್ಲಿ ಪ್ರಾಚೀನವಾಗಿ ಈ ಕಲೆಯು ದಾಸರಾಟ, ಹಗರಣ, ಮುಂತಾದ ರೂಪದಲ್ಲಿ ಬಳಕೆಯಲ್ಲಿತ್ತು. ಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿ ಈ ಕಲೆಯು ಸಂಸ್ಕೃತಿ, ಸಾಮಾಜಿಕ ಜೀವನದೊಂದಿಗೆ ಹಾಸುಹೊಕ್ಕಾಗಿದೆ. ಈ ಪ್ರದೇಶವು ಪರಿಸರ, ಸಾಂಸ್ಕೃತಿಕ ಮತ್ತು ಕಲಾತ್ಮಕ ವೈವಿಧ್ಯತೆಗೆ ಹೆಸರುವಾಸಿಯಾಗಿದೆ. ಈ ಕಲೆಯಲ್ಲಿ ಕಲಾವಿದರು ಅನುಭವಿಸುತ್ತಿರುವ ಸವಾಲುಗಳನ್ನು ಮತ್ತು ಸಾಧ್ಯತೆಗಳನ್ನು ತಿಳಿಯುವುದು ಈ ಲೇಖನದ ಮುಖ್ಯ ಉದ್ದೇಶವಾಗಿದೆ.

- ಹಾಡುಗಾರಿಕೆ ಮತ್ತು ಮದ್ದಳೆ ಬಾರಿಸುವ ವಾದಕರು, ವೇಷಭೂಷಣಗಳು, ನೃತ್ಯಗಳು, ಅಭಿವ್ಯಕ್ತಿಗಳು, ಕ್ರಿಯೆಗಳು ಮತ್ತು ಪದಗಳೊಂದಿಗೆ ಸನ್ನೆಗಳ ವ್ಯಾಖ್ಯಾನದೊಂದಿಗೆ ವಿಲೀನಗೊಳ್ಳುವ ಈ ಕಲಾ ಪ್ರಕಾರದ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ನಂತರ ಪ್ರಸಂಗ (ಕಥೆ) ಮುಂದೆ ಸಾಗುತ್ತಲೇ ಸಂಭಾಷಣೆಗಳು ಮತ್ತು ಚರ್ಚೆಗಳು. ಈ ಕ್ರಿಯಾತ್ಮಕ ಕಲೆಯ ಅತ್ಯಂತ ಗಮನಾರ್ಹ ಆಕರ್ಷಣೆಯೆಂದರೆ ಪ್ರದರ್ಶಕರು ಹೊಳೆಯುವ ವೇಷಭೂಷಣಗಳು ಮತ್ತು ಆಕರ್ಷಕ ಬಣ್ಣಗಳನ್ನು ಹಚ್ಚಿಕೊಳ್ಳುವುದು, ತಿಲಕ, ಮೀಸೆ, ಸೌಂದರ್ಯ ಮತ್ತು ಬಾಹ್ಯರೇಖೆಗಳನ್ನು ಪ್ರಸಂಗದ ಪಾತ್ರಗಳಿಗೆ ಸರಿಹೊಂದುವಂತೆ ಧರಿಸುತ್ತಾರೆ. ಗಾಯನವು ಯಾವಾಗಲೂ ಮದ್ದಳೆ ಮತ್ತು ತಾಳಗಳೊಂದಿಗೆ ಹಾರ್ಮೋನಿಯಂ ನಂತಹ ತಾಳವಾದ್ಯ ವಾದ್ಯಗಳೊಂದಿಗೆ ಇರುತ್ತದೆ.
- ಮುಮ್ಮೇಳ ಮತ್ತು ಹಿಮ್ಮೇಳಗಳು ಪಾತ್ರಗಳ ಕುಣಿತಕ್ಕೆ ಮತ್ತು ಕಥಾಪ್ರಸಂಗವನ್ನು ಮುನ್ನಡೆಸುವುದಕ್ಕೆ ಸಹಾಯಕವಾಗಿವೆ. ನಂತರ ಸಂಭಾಷಣೆಗಳು/ಚರ್ಚೆಗಳು ಮತ್ತು ಕಥೆಯನ್ನು ಚಲಿಸುವಂತೆ ಮಾಡುತ್ತದೆ. ಮುಖ್ಯವಾಗಿ ಸಾರಥಿಯು ಪಾತ್ರಗಳನ್ನು ಮಾತನಾಡಿಸುವ ಮೂಲಕ ಕಥೆಯನ್ನು ನಿರೂಪಿಸುತ್ತಾನೆ, ಸಂಪೂರ್ಣ ಪ್ರದರ್ಶನವನ್ನು ನಡೆಸುವ ಮತ್ತು ಸಮಯವನ್ನು ಕಾಯ್ದುಕೊಳ್ಳುವ ಜವಾಬ್ದಾರಿಯೂ ಸಾರಥಿಯದ್ದಾಗಿದೆ. ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕು, ಸಿರುಗುಪ್ಪ, ಸಂಡೂರು, ಹಡಗಲಿ, ಕಂಪ್ಲಿ, ಹೊಸಪೇಟೆ ಮುಂತಾದ ತಾಲ್ಲೂಕುಗಳಲ್ಲಿ ಬಯಲಾಟವನ್ನು ಸ್ವತಃ ಕಲಾವಿದರೇ ಹಣ ಖರ್ಚು ಮಾಡಿಕೊಂಡು ಆಡುತ್ತಾರೆ. ಸಾಂಪ್ರದಾಯಿಕವಾಗಿ ಇದು ಇಡೀ ರಾತ್ರಿ (ಮುಸ್ಸಂಜೆಯಿಂದ ಮುಂಜಾನೆಯವರೆಗೆ), ಬಯಲು ಪ್ರದೇಶದಲ್ಲಿ ಅಂದರೆ ಊರಿನ ಮುಖ್ಯಬೀದಿಯಲ್ಲಿ ಅಟ್ಟವನ್ನು ಕಟ್ಟಿಕೊಂಡು ಆಡುವುದಿದೆ. ಬಯಲಾಟವು ರಾತ್ರಿಯ ಪ್ರದರ್ಶನವಾಗಿರುವುದರಿಂದ ಕಲಾವಿದರು ರಾತ್ರಿಯವರೆಗೂ ವಿಶ್ರಾಂತಿ ಪಡೆಯುತ್ತಾರೆ ಮತ್ತು ರಾತ್ರಿಯಲ್ಲಿ ಪ್ರದರ್ಶನ ನೀಡುತ್ತಾರೆ. ಅವರಿಗೆ, ರಾತ್ರಿ ಹಗಲು ಆಗುತ್ತದೆ. ಬಯಲಾಟ ಕಲೆಯ ಯಶಸ್ವಿ ಅನುಷ್ಠಾನಕ್ಕೆ ಅನುಸರಿಸಬೇಕಾದ ನಾಲ್ಕು ಪ್ರಮುಖ ಅಂಶಗಳನ್ನು ಹೊಂದಿದೆ: ಅವು ಚೌಕಿ, ಹಿಮ್ಮೇಳ, ರಂಗಸ್ಥಳ ಮತ್ತು ಮುಮ್ಮೇಳ. ಕಲೆಯ ಉತ್ತಮ–ಗುಣಮಟ್ಟದ ಪ್ರದರ್ಶನಕ್ಕಾಗಿ ಈ ಎಲ್ಲಾ ಘಟಕಗಳ ನಡುವೆ ಉತ್ತಮ ಸಮನ್ವಯವಿರಬೇಕು. ಬಯಲಾಟದ ಪ್ರಮುಖ ಅಂಶವೆಂದರೆ ಚೌಕಿ (ಹಸಿರು ಕೋಣೆ) ಯಲ್ಲಿ ಕಲಾವಿದರು ತಮ್ಮ ಪ್ರಸಾಧನ ಮಾಡುತ್ತಾರೆ, ವೇಷಭೂಷಣಗಳನ್ನು ಧರಿಸುತ್ತಾರೆ

ಮತ್ತು ಕಿರೀಟ, ಪಗಡೆ (ಕೇದಿಗೆ ಮತ್ತು ವಿವಿಧ ರೀತಿಯ ಕಿರೀಟಗಳು) ಆಭರಣಗಳನ್ನು ಸರಿಪಡಿಸುತ್ತಾರೆ, ನಿಯೋಜಿಸಲಾದ ಪಾತ್ರಗಳನ್ನು ಅವಲಂಬಿಸಿ. ರಂಗಸ್ಥಳದಲ್ಲಿ ನಿಜವಾದ ಪ್ರದರ್ಶನವನ್ನು ಪ್ರಾರಂಭಿಸುವ ಮೊದಲು ಗಣಪತಿ ಪೂಜೆ (ಚೌಕಿ ಪೂಜೆ) ಯೊಂದಿಗೆ ಸಿದ್ಧಗೊಳ್ಳುವ ಸಂಪ್ರದಾಯವನ್ನು ಕಲೆ ಹೊಂದಿದೆ.

- ಅಗ್ರ ಕಲಾವಿದರ ಜೀವನ ಮತ್ತು ಇತರ ಅಂಶಗಳ ಕುರಿತು ಕೃತಿಗಳು ಹೊರಬಂದಿಲ್ಲ. ಬಳ್ಳಾರಿ ಜಿಲ್ಲೆಯ ಬಯಲಾಟಗಳು ಎಂಬ ಸಂಶೋಧನಾ ಕೃತಿಯನ್ನು ಡಾ.ಕೆ.ಆರ್. ದುರ್ಗದಾಸ್, ಉತ್ತರ ಕರ್ನಾಟಕದ ಬಯಲಾಟಗಳು ಎಂಬ ಕೃತಿಯನ್ನು ಬಸವರಾಜ ಮಲಶೆಟ್ಟಿ ಯವರು ರಚಿಸಿದ್ದಾರೆ. ಇನ್ನುಳಿದಂತೆ ಸಣ್ಣಪುಟ್ಟ ಲೇಖನಗಳು ಪತ್ರಿಕೆಗಳಲ್ಲಿ ವರದಿಯಾಗಿವೆ.

**ಬಯಲಾಟ ಕಲೆ ಎದುರಿಸುತ್ತಿರುವ ಸವಾಲುಗಳು:**

ಬಯಲಾಟದ ಹಸ್ತಪ್ರತಿಗಳನ್ನು ಗಮನಿಸಿದರೆ ಕಥೆ ಪೌರಾಣಿಕವಾಗಿರಬಹುದು. ಆದರೆ ಆ ಕಥೆಗೆ ಸಂಬಂಧಿಸಿದಂತೆ ಪಾತ್ರಗಳ ಸಂಭಾಷಣೆ ದಿನಬದುಕಿನ ಆಡುಮಾತಿನ ಜೀವನಾನುಭವದ ಕೋಶಗಳಾಗಿರುತ್ತವೆ. ಹೀಗಾಗಿ ಮಾತಿನ ಅನನ್ಯತೆಯನ್ನು ಅನಕ್ಷರಸ್ಥರ ನೆಲೆಯಲ್ಲಿ ನಿರೂಪಿಸುವ ಇಲ್ಲವೇ ಭಾಷಾಶಾಸ್ತ್ರದ ಮೂಲತತ್ತ್ವಗಳನ್ನು ರಚಿಸಿಕೊಳ್ಳುವ ದೃಷ್ಟಿಯಿಂದಲೂ ಬಯಲಾಟದ ಹಸ್ತಪ್ರತಿಗಳಲ್ಲಿನ ಸಂಭಾಷಣೆ–ಸನ್ನಿವೇಶ ಅಧ್ಯಯನ ಯೋಗ್ಯವಾಗಿವೆ. ಹೀಗಾಗಿ ಮಾತಿಗಿರಬಹುದಾದ ದೇಶೀಯತೆ ಅದರಲ್ಲಿಯ ಜನರ ಬದುಕನ್ನು ದಾಖಲಿಸುವ ಉದ್ದೇಶದಿಂದಲೂ ಈ ಅಧ್ಯಯನ ಪ್ರಮುಖವೆಂದು ಭಾವಿಸಬಹುದಾಗಿದೆ. ಇನ್ನೊಂದು ಮುಖ್ಯ ಸಂಗತಿಯೆಂದರೆ ಕಥೆ ಪೌರಾಣಿಕ ಇಲ್ಲವೇ ಐತಿಹಾಸಿಕವಾಗಿರಬಹುದು. ಆದರೆ ಕಥೆಗೆ ಸಂಭಾಷಣೆ ಸಂಬಂಧಿಸಿದಂತೆ ಹಾಡುಗಳನ್ನು ರಚಿಸಿರುವುದು ಬಯಲಾಟದ ಕವಿಗಳಿಗಿರುವ ಮತ್ತೊಂದು ಸೃಜನಾತ್ಮಕವಾದ ಗೇಯಗುಣವಾಗಿದೆ. ಹೀಗಾಗಿ ರಾಗ–ತಾಳ–ಲಯ ಅದರಿಂದ ಒಂದು ಘಟನೆ ನೋಡುಗರಿಗೆ ಮುಟ್ಟುವ ರೀತಿಯಿಂದಲೂ ಬಯಲಾಟದ ಪಠ್ಯಗಳು ಅಧ್ಯಯನಕ್ಕೆ ಒಳಗಾಗಬೇಕಾಗಿರುವುದು ಅಗತ್ಯವಾಗಿದೆ.

**ಸ್ತ್ರೀ ಪಾತ್ರಗಳ ರಂಗಭೂಮಿ ಪ್ರವೇಶ**

ಬಳ್ಳಾರಿ ಜಿಲ್ಲೆಯ ಬಯಲಾಟ ಪ್ರಕಾರದಲ್ಲಿ ಮೊದಲನೆಯದಾಗಿ ಸ್ತ್ರೀ ಪಾತ್ರಗಳ ರಂಗಭೂಮಿ ಪ್ರವೇಶ ವಿರಳವಾಗಿದೆ. ಕೇವಲ ಕೂಡ್ಲಿಗಿ ಭಾಗದಲ್ಲಿರುವ ಮಹಿಳೆಯರು ಮಾತ್ರ ವಂಶಪಾರಂಪರಿಕವಾಗಿ ಬಯಲಾಟ ಕಲೆಯ ಪ್ರವೇಶವನ್ನು ಮಾಡುತ್ತಿದ್ದಾರೆ. ಸ್ತ್ರೀ ಪಾತ್ರಧಾರಿಗಳು ಇತ್ತ ಹೆಚ್ಚು ಮುಖಮಾಡುತ್ತಿಲ್ಲ. ಅವರು ಹೆಚ್ಚಾಗಿ ಶಿಷ್ಟ ರಂಗಭೂಮಿಯ ಕಡೆಗೆ ವಾಲುತ್ತಿದ್ದಾರೆ. ಹಿರಿಯ ಕಲಾವಿದರಿಗೆ ಕಲೆಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಕೊರತೆಯಿಂದ ಬಯಲಾಟ ಕಲೆಗಳು ಅವನತಿಯ ಅಂಚಿನಲ್ಲಿವೆ. ಇವುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ನೀಡಬೇಕಾಗಿದೆ. ರಂಗ ಕಲೆಗಳ ಬಗ್ಗೆ ಕೆಲವರು ಪ್ರಬಂಧ ಬರೆಯುತ್ತಾರೆಯೇ ಹೊರತು ಇದರ ಬಗ್ಗೆ ಅರಿವು ಮೂಡಿಸುವ ಕೆಲಸವಾಗುತ್ತಿಲ್ಲ. ಹೆಸರಿಗೆ ಮಾತ್ರ ಡಾಕ್ಟರೇಟ್ ಪದವಿ ಪಡೆಯುವಂತಾಗಿರುವುದು ದುರದೃಷ್ಟಕರ ಸಂಗತಿ ಎಂದರು. ಯಕ್ಷಗಾನ ಕಲೆ ಕೇವಲ ಆಟವಲ್ಲ, ಅದೊಂದು ಸಂಗೀತದ ಪ್ರಕಾರವಾಗಿದೆ. ಅದು ಕೇವಲ ಕರಾವಳಿಗೆ ಮಾತ್ರ ಸೀಮಿತವಲ್ಲ. ಅದನ್ನು ಬಯಲಾಟದ ಆರಂಭದ ಪ್ರಕಾರದ ಕಲೆಗಳಲ್ಲಿ ಕಾಣಬಹುದಾಗಿದೆ. ಬಯಲಾಟ ಕಲಾವಿದರು ಅನಕ್ಷರಸ್ಥರಾಗಿದ್ದು, ಯಾವುದೇ ತರಹದ

ಸಂಗೀತದ ಜ್ಞಾನವಿಲ್ಲ. ಆದರೂ ಎಲ್ಲಾ ರಾಗಗಳನ್ನೂ ಗುರುತಿಸಬಲ್ಲರು. ಹಿರಿಯ ಕಲಾವಿದರ ಕಲಾ ಶ್ರೀಮಂತಿಕೆಯನ್ನು ಸಂಗ್ರಹಿಸಿ ಮುಂದಿನ ಪೀಳಿಗೆಗೆ ಕೊಡಬೇಕಾಗಿರುವುದು ಎಲ್ಲರ ಜವಾಬ್ದಾರಿ.

**ಆರ್ಥಿಕ ಸಂಪನ್ಮೂಲ**

ಬಯಲಾಟವು ಆರ್ಥಿಕ ಸಂಪನ್ಮೂಲವನ್ನು ಎದುರಿಸುತ್ತಿದೆ. ಒಂದು ಬಯಲಾಟ ಪ್ರದರ್ಶನಕ್ಕೆ ಅಂದಾಜು ಸುಮಾರು 4 ರಿಂದ 5 ಲಕ್ಷ ರೂ.ಗಳು ಖರ್ಚಾಗುತ್ತದೆ. ಇಲ್ಲಿ ಯಾರು ಬಯಲಾಟದಲ್ಲಿ ಪಾತ್ರವನ್ನು ಮಾಡಲು ಇಚ್ಛಿಸುತ್ತಾರೋ ಅವರೇ ತಮ್ಮ ದೇಣಿಗೆಯನ್ನು ನೀಡಬೇಕಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ದೇಣಿಗೆ ನೀಡಿ ಬಯಲಾಟದಲ್ಲಿ ಪಾತ್ರವಹಿಸುವುದಕ್ಕೆ ಯುವಕರು ಹಿಂದೇಟು ಹಾಕುತ್ತಿದ್ದಾರೆ. ಬಯಲಾಟವನ್ನು ಆಡುವಂತಹ ಪಾತ್ರಧಾರಿಗಳಲ್ಲಿ ಕೆಲವು ಅನಕ್ಷರಸ್ಥರು ಇರುತ್ತಾರೆ. ಇವರನ್ನು ವ್ಯಾಕರಣಬದ್ಧವಾಗಿ ಉಚ್ಚಾರಣೆಯನ್ನು ತಿದ್ದುವುದಕ್ಕೆ ಒಳ್ಳೆಯ ಭಾಗವತರು ಬೇಕಾಗುತ್ತದೆ. ಅಂತಹ ಭಾಗವತರು ಅಥವಾ ಬಯಲಾಟದ ಮಾಸ್ತರರ ಕೊರತೆ ಎದ್ದು ಕಾಣುತ್ತಿದೆ. ನಾಟಕ ಕ್ಷೇತ್ರದಲ್ಲಿ ನಿರ್ದೇಶಕರು ಎಂದು ಕರೆಯಿಸಿಕೊಳ್ಳುವವರು ಬಯಲಾಟದಲ್ಲಿ ಬಯಲಾಟದ ಮಾಸ್ತರರು ಅಷ್ಟೇನು ವಿದ್ಯಾವಂತರಾಗಿರುವುದಿಲ್ಲ. ಅವರು ಪ್ರಾಥಮಿಕ ಶಿಕ್ಷಣ ಅಥವಾ ಪ್ರೌಢಶಿಕ್ಷಣವನ್ನು ಪಡೆದವರಾಗಿರುತ್ತಾರೆ. ಹಾಗಾಗಿ ಪದಗಳ ಉಚ್ಚಾರಣೆಯನ್ನು ನುಡಿಸುವುದಕ್ಕೆ ಇವರಿಂದ ಕೆಲವೊಮ್ಮೆ ಸಾಧ್ಯವಾಗುವುದಿಲ್ಲ. ಬಯಲಾಟದಲ್ಲಿ ಸಂಸ್ಕೃತದ ಪದಗಳು ಇದ್ದು ಇವುಗಳನ್ನು ನುಡಿಯುವುದಕ್ಕೆ ಪಾತ್ರಧಾರಿಗಳು ಹರಸಾಹಸ ಪಡುತ್ತಾರೆ. ಮಾಸ್ತರರು ಕೆಲವೊಮ್ಮೆ ಛಡಿ ಏಟು ನೀಡಿ ಪಾತ್ರಧಾರಿಯಿಂದ ಪದಗಳ ಉಚ್ಚಾರಣೆ ಮಾಡಿಸುತ್ತಾನೆ. ವೇಷಭೂಷಣವನ್ನು ಸಹ ಬಾಡಿಗೆ ರೂಪದಲ್ಲಿ ತರಬೇಕಾಗಿರುವುದರಿಂದ ಬಾಡಿಗೆಗಾಗಿ ಹಣವನ್ನು ನೀಡಬೇಕಾಗುತ್ತದೆ. ಆಧುನಿಕ ಕಾಲಘಟ್ಟದಲ್ಲಿ ವೇಷಭೂಷಣವನ್ನು ಹೊರುವಂತಹ ಕಲಾವಿದರು ಕಡಿಮೆಯಾಗಿದ್ದಾರೆ. ಅವುಗಳು ಬಹಳ ತೂಕವಾಗಿದ್ದು, ಬಯಲಾಟ ಪಾತ್ರಧಾರಿಯಾಗಲು ಯುವಕರು ಹಿಂದೇಟು ಹಾಕುತ್ತಾರೆ.

**ತರಬೇತಿ**

ಬಯಲಾಟ ಪಾತ್ರಧಾರಿಗಳಿಗೆ ಮಾತುಗಳನ್ನು ಕಲಿಸಲು ಹಾಡುಗಳನ್ನು ಹೇಳಿಕೊಡಲು, ಕುಣಿತವನ್ನು ಕಲಿಸಲು ಒಳ್ಳೆಯ ತರಬೇತಿ ನೀಡುವ ಬಯಲಾಟದ ಮಾಸ್ತರರ ಅಗತ್ಯವಿದೆ. ಇಂತಹ ಮಾಸ್ತರರಾಗಲು ಇಂದು ಯುವಕರು ಮುಂದೆ ಬರುತ್ತಿಲ್ಲ. ಕೆಲವರು ಮಾತ್ರ ಆಸಕ್ತಿಯಿಂದ ಈ ಭಾಗವತರಾಗಲು ಅಥವಾ ಮಾಸ್ತರರಾಗಲು ಮುಂದೆ ಬರುತ್ತಿದ್ದಾರೆ. ಅವರಿಗೆ ತರಬೇತಿ ನೀಡುವ ಯಾವುದೇ ಯೋಜನೆಗಳನ್ನು ನಮ್ಮ ಸರ್ಕಾರಗಳು ರೂಪಿಸಿಲ್ಲ.

**ರಂಗಮಂಟಪ ಅಥವಾ ಅಟ್ಟ**

ಬಯಲಾಟಗಳು ನಡೆಯುವುದೇ ಬಯಲು ಪ್ರದೇಶದಲ್ಲಿ ಅದರಲ್ಲೂ ಊರಿನ ಅಗಸೆ ಬಾಗಿಲುಗಳ ಹತ್ತಿರ ಇವುಗಳನ್ನು ಹೂಡುವುದರಿಂದ ಪ್ರೇಕ್ಷಕರಿಗೆ ಕುಳಿತುಕೊಳ್ಳಲು ಅನುಕೂಲವಿರುವುದಿಲ್ಲ. ಹಾಗಾಗಿ ಬಹಳಷ್ಟು ಜನರು ಬಯಲಾಟ ನೋಡಲು ಬರುವುದಿಲ್ಲ. ಹಾಗಾಗಿ ವೈಜ್ಞಾನಿಕ ಹಿನ್ನೆಲೆಯಲ್ಲಿ ಅಟ್ಟವನ್ನು ನಿರ್ಮಾಣ ಮಾಡಬೇಕಾಗಿದೆ.

**ಕಥಾಪ್ರಸಂಗಗಳು:**

ಪ್ರಾಚೀನ ಕಾಲದಿಂದಲೂ ಮಹಾಭಾರತ ಮತ್ತು ರಾಮಾಯಣ ಕಾವ್ಯಗಳು

ಭಾಗವತದಂತಹ ಪುರಾಣಗಳಿಂದ ಕಥಾ ಪ್ರಸಂಗಗಳನ್ನು ಎತ್ತಿಕೊಳ್ಳುವುದಿದೆ. ಆದರೆ ಬರೀ ಆಡಿದ ಪ್ರಸಂಗಗಳನ್ನೇ ಪದೇ ಪದೇ ಪುನರಾವರ್ತನೆಯಾಗುತ್ತದೆ. ಒಂದು ಮನೆತನದವರು ಒಂದೇ ಪಾತ್ರವನ್ನು ಪ್ರತೀ ವರ್ಷ ಆಡುತ್ತಿರುತ್ತಾರೆ. ಇದು ಬದಲಾಗಬೇಕು. ಅವರಿಗೆ ಬೇರೆ ಬೇರೆ ಕಥಾಪ್ರಸಂಗಗಳಲ್ಲಿ ಆಸಕ್ತಿ ಮೂಡಿಸುವಂತೆ ಮಾಡಬೇಕು. ಆಗ ಅವರಲ್ಲಿ ಕಲೆಯು ದ್ವಿಗುಣಗೊಳ್ಳುತ್ತದೆ.

**ಸಂಘಟನೆ:**

- ಒಂದು ಕಾಲಕ್ಕೆ ಜನಪ್ರಿಯವಾಗಿದ್ದ ಬಯಲಾಟಗಳು ಇಂದು ಯಾಕೆ ನಶಿಸುತ್ತಿವೆ?
- ಬಯಲಾಟದ ಕಲಾವಿದರ ನಿಜವಾದ ಸಮಸ್ಯೆಗಳೇನು?
- ಬಯಲಾಟ ಕಲೆಯಲ್ಲಿರುವ ನ್ಯೂನತೆಗಳೇನು?
- ಬದಲಾದ ಕಾಲಕ್ಕೆ ತಕ್ಕಂತೆ ಬಯಲಾಟಗಳ ತಂತ್ರಗಾರಿಕೆಯಲ್ಲಿ ಬದಲಾವಣೆ ಮಾಡಲು ಸಾಧ್ಯವಾ?
- ಪುರಾಣ ಪರಿಕಲ್ಪನೆಗಳ ಪ್ರಸಂಗಗಳನ್ನೇ ಆಧರಿಸಿದ ಬಯಲಾಟಗಳಿಗೆ ಚಾರಿತ್ರಿಕ, ಸಾಮಾಜಿಕ ವಿಷಯಗಳನ್ನು ಅಳವಡಿಸಲು ಸಾಧ್ಯವಾ? ಹಾಡು ಸಂಗೀತ ನೃತ್ಯಗಳೇ ವಿಜೃಂಭಿಸುವ ದೊಡ್ಡಾಟದಂತಹ ಕಲೆಗಳಲ್ಲಿ ಆಧುನಿಕ ಅಭಿನಯ ತಂತ್ರಗಳನ್ನು ಅಳವಡಿಸಿ ಹೊಸ ರೀತಿಯ ಕಾಯಕಲ್ಪ ಕೊಡಲು ಆಗುತ್ತದಾ?
- ಸರಳವಾದ ಅರ್ಥಗ್ರಹಿಕೆಗೆ ಅಡೆತಡೆ ಒಡ್ಡಬಹುದಾಗಿರುವ ಬಯಲಾಟದೊಳಗಿನ ಕ್ಲಿಷ್ಟತೆಯನ್ನು ಕಡಿಮೆಗೊಳಿಸಿ ಇನ್ನಷ್ಟು ಸುಲಭಗೊಳಿಸಲು ಸಾಧ್ಯವಾ?
- ಹೀಗೆ... ಕೆಲವಾರು ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯುವ ಕೆಲಸಗಳನ್ನು ಸರಕಾರಗಳು, ಅಕಾಡೆಮಿಗಳು, ಜಾನಪದ ವಿಶ್ವವಿದ್ಯಾಲಯಗಳು, ವಿದ್ಯಾವಂತ ಕಲಾವಿದರುಗಳು, ಡಾಕ್ಟರೇಟ್ ಮಾಡಿದ ಬುದ್ಧಿಜೀವಿಗಳು ಆಲೋಚಿಸಬೇಕಿದೆ. ಕಾಲಕ್ಕೆ ತಕ್ಕಂತೆ ರೂಪಾಂತರ ಹೊಂದದಿದ್ದರೆ ಯಾವ ಕಲೆಯೂ ಬದುಕಲಾರದು. ಹೀಗಾಗಿ ಬಯಲಾಟಗಳೂ ಸಹ ಬದಲಾಗಬೇಕಿದೆ ಆ ನಿಟ್ಟಿನಲ್ಲಿ ಕಾರ್ಯಯೋಜನೆಗಳು ಪ್ರಾಮಾಣಿಕವಾಗಿ ನಡೆಯಬೇಕಿದೆ. ಆದರೆ ಇದನ್ನು ಮಾಡುವವರು ಯಾರು? ಬಯಲಾಟ ನಾಟಕ ಪ್ರದರ್ಶನಕ್ಕೆ ಉತ್ತಮ ಸಂಘಟನೆಯ ಅವಶ್ಯಕತೆ ಇದೆ. ಸಂಘಟಕರು ಉತ್ತಮ ಸಂವಹನ ಗುಣವನ್ನು ಹೊಂದಿರಬೇಕು. ಪಾತ್ರಧಾರಿಗಳನ್ನು ಒಗ್ಗೂಡಿಸುವುದು, ಅವರಲ್ಲಿ ಸೌಹಾರ್ದತೆಯನ್ನು ಉಂಟು ಮಾಡುವ ಗುಣ ಸಂಘಟಕರಲ್ಲಿ ಇರಬೇಕು. ಇಲ್ಲವಾದಲ್ಲಿ ಬಯಲಾಟ ತರಬೇತಿಯು ಅರ್ಧಕ್ಕೆ ನಿಂತು ಹೋಗಿ ಬಯಲಾಟ ಕಲಿಕೆಯನ್ನು ನಿಲ್ಲಿಸುತ್ತಾರೆ. ಹಾಗಾಗಿ ಸಂಘಟನೆಯು ಅತ್ಯಂತ ಮುಖ್ಯವಾಗಿ ಬೇಕಾಗುತ್ತದೆ.

**ಜಾತಿವಾರು ಬಯಲಾಟ:**

- ಹಳ್ಳಿಗಳಲ್ಲಿ ಒಂದು ಜಾತಿಯವರು ಆಡುವ ಬಯಲಾಟದಲ್ಲಿ ಇನ್ನೊಂದು ಜಾತಿಯ ಕಲಾವಿದರು ಸೇರಿಸಿಕೊಳ್ಳುವುದಿಲ್ಲ. ಇಲ್ಲಿ ಜಾತಿ ಪದ್ಧತಿಯು ಎದ್ದು ಕಾಣುತ್ತದೆ. ಹೀಗಾಗಿ ಬಯಲಾಟ ಕಲೆಯಲ್ಲಿ ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡಬೇಕಾಗಿದೆ.
- ಹಳ್ಳಿಗಳಲ್ಲಿ ಬಯಲಾಟ ಪರಂಪರೆಯು ಎದ್ದು ಕಾಣುತ್ತಿದ್ದು, ಅವರಲ್ಲಿ ಶೈವ ಮತ್ತು ವೈಷ್ಣವ ಪಂಥಗಳು ಕೆಲಸ ಮಾಡುತ್ತಿವೆ. ಶೈವರು ಹೆಚ್ಚಾಗಿ ಗಿರಿಜಾ ಕಲ್ಯಾಣ, ವೈಷ್ಣವರು

ಶ್ರೀಕೃಷ್ಣನಿಗೆ ಸಂಬಂಧಿಸಿದಂತಹ ಬಯಲಾಟಗಳನ್ನು ಆಡಲು ಮುಂದಾಗುತ್ತಾರೆ. ಇಂತಹ ಅನೇಕ ಸಮಸ್ಯೆಗಳನ್ನು ಮತ್ತು ಸವಾಲುಗಳನ್ನು ಬಯಲಾಟ ಪ್ರಕಾರವು ಎದುರಿಸುತ್ತಿದೆ. ಇಂತಹ ಸವಾಲುಗಳನ್ನು ನಿವಾರಣೆ ಮಾಡಲು ಹಲವು ಉಪಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

- ಕರ್ನಾಟಕದ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಮೂಡಲಪಾಯ ಬಯಲಾಟದ ಪ್ರಕಾರಗಳು ಪ್ರಚಲಿತದಲ್ಲಿದ್ದವು. ಪ್ರದೇಶದಿಂದ ಪ್ರದೇಶಕ್ಕೆ ಕೆಲವು ಬದಲಾವಣೆ, ಭಿನ್ನತೆ ಹಾಗೂ ಬೇರೆ ಹೆಸರುಗಳನ್ನು ಹೊಂದಿದ್ದರೂ ಮೂಲದಲ್ಲಿ ಇವೆಲ್ಲಾ ಮೂಡಲಪಾಯ ಬಯಲಾಟಗಳೇ ಆಗಿವೆ. ಜನಪದ ಪರಂಪರೆಯ ಪ್ರದರ್ಶಕ ಕಲೆಯಾದ ಈ ಬಯಲಾಟಗಳು ಕೇವಲ ಮನರಂಜನೆಯ ಸಾಧನಗಳಾಗಿರದೇ ಗ್ರಾಮೀಣ ಪ್ರದೇಶಗಳ ಶ್ರಮ ಸಂಸ್ಕೃತಿಯ ಪ್ರತೀಕವಾಗಿವೆ.
- ಶ್ರಮದಾಯಕವಾದ ಕೃಷಿ ಬದುಕನ್ನೇ ಒಂದು ಕಲಾಪ್ರಕಾರವಾಗಿ ಗ್ರಾಮೀಣ ಜನಪದರು ರೂಪಿಸಿದ್ದಾರೆ. ಬಹುತೇಕ ದುಡಿಯುವ ಜನರು ಕಟ್ಟಿ ಬೆಳೆಸಿದ ಈ ಬಯಲಾಟ ಕಲಾಮಾಧ್ಯಮವು ಎಲ್ಲಾ ಜಾತಿ ಧರ್ಮ ವರ್ಗದ ಜನರ ಸಹಭಾಗಿತ್ವದಲ್ಲಿ ನಿರ್ಮಿತಿಯಾಗಿದ್ದು ನಿಜವಾದ ಅರ್ಥದಲ್ಲಿ ಗ್ರಾಮಗ್ರಾಮಗಳಲ್ಲಿ ಸಾಮರಸ್ಯ ಹಾಗೂ ಸೌಹಾರ್ದತೆಯ ದ್ಯೋತಕವಾಗಿವೆ.
- ಬದುಕಿಗಾಗಿ ಕೃಷಿ ಹಾಗೂ ಮನೋರಂಜನೆಗಾಗಿ ಬಯಲಾಟವನ್ನು ಶತಮಾನಗಳಿಂದ ರೂಢಿಸಿಕೊಂಡು ಬಂದ ಅನಕ್ಷರಸ್ಥ ಜನಪದ ಕಲಾವಿದರು ಬಯಲಾಟ ಕಲಾಪ್ರಕಾರದ ಮೂಲಕ ಈ ನಾಡಿನ ಸಾಂಸ್ಕೃತಿಕ ಶ್ರೀಮಂತಿಕೆಗೆ ಬಹುದೊಡ್ಡ ಕೊಡುಗೆಯನ್ನು ಕೊಟ್ಟಿದ್ದಾರೆ.

**ಬಯಲಾಟದಲ್ಲಿನ ಸಾಧ್ಯತೆಗಳು:**

- ಸ್ತ್ರೀ ಪಾತ್ರಗಳಲ್ಲಿ ಅಭಿನಯಿಸುವವರ ಸಂಖ್ಯೆ ಕಡಿಮೆ ಇರುವುದರಿಂದ ಸ್ತ್ರೀ ಪಾತ್ರಗಳಲ್ಲಿ ಅಭಿನಯಿಸುವುದಕ್ಕೆ ಪ್ರೋತ್ಸಾಹಿಸಬೇಕಾಗಿದೆ. ಬಹುತೇಕವಾಗಿ ಬಯಲಾಟ ಸಂಘಟಕರು ಆರ್ಥಿಕ ಸಮಸ್ಯೆಯನ್ನು ಎದುರಿಸುತ್ತಿದ್ದು, ಇದಕ್ಕೆ ಸರ್ಕಾರಗಳು ಧನ ಸಹಾಯವನ್ನು ಮಾಡಬೇಕಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಎಂಬ ತಾರತಮ್ಯ ಮಾಡದೆ ಎಲ್ಲಾ ಸಮುದಾಯದವರಿಗೆ ಧನ ಸಹಾಯವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಾಡಬೇಕಾಗಿದೆ. ಸರ್ಕಾರಗಳು ಭಾಗವತರು ಅಥವಾ ಬಯಲಾಟದ ಮಾಸ್ತರರನ್ನು ಹುಟ್ಟು ಹಾಕಲು ತರಬೇತಿಗಳನ್ನು ನೀಡಬೇಕಾಗಿದೆ. ಬಯಲಾಟದ ಭಾಷೆಯನ್ನು ತಿದ್ದಲು ಕನ್ನಡ ಪಂಡಿತರ ನೆರವನ್ನು ಪಡೆಯುವಂತೆ ಮಾಡಬೇಕಾಗಿದೆ. ಬಯಲಾಟ ಪ್ರದರ್ಶಕರಿಗೆ ಕಡಿಮೆ ವೆಚ್ಚದಲ್ಲಿ ವೇಷಭೂಷಣಗಳು ದೊರೆಯುವಂತೆ ಸರ್ಕಾರ ನೋಡಿಕೊಳ್ಳಬೇಕು. ರಾಮಾಯಣ ಮಹಾಭಾರತದಂತಹ ಕಥೆಗಳನ್ನು ಆಡದೆ ಆಧುನಿಕವಾಗಿ ಹೊಸ ಹೊಸ ಕಥಾವಸ್ತುವನ್ನು ರೂಪಿಸಿ ಆಟವನ್ನು ಆಡಬೇಕಾಗಿದೆ.
- ಬಯಲಾಟಗಳನ್ನು ಹಿಂದಿನಂತೆಯೇ ರಾತ್ರಿಯುದ್ದಕ್ಕೂ ನಡೆಸುವುದು ಇಂದು ಸಾಧ್ಯವಾಗುವುದಿಲ್ಲ. ಎಷ್ಟೇ ದೊಡ್ಡದಾದ ವಸ್ತು ಪ್ರಸಂಗಗಳಿದ್ದರೂ ಸಾರವತ್ತಾದ ಅಂಶಗಳಿಂದ ಮೂರು ತಾಸಿನ ಕನಿಷ್ಟ ಮಿತಿಯಲ್ಲಿ ಸಿನೆಮಾ ನಾಟಕಗಳಂತೆ ಬಯಲಾಟಗಳನ್ನು ಸಹ ಕಾಲಮಿತಿಯಲ್ಲಿ ಪ್ರದರ್ಶಿಸುವುದು ಸಾಧ್ಯ. ಆದರೆ ಇದಕ್ಕಾಗಿ ವಿಶಿಷ್ಟ ತರಬೇತಿಯನ್ನು ಕಲಾವಿದರಿಗೆ ಒದಗಿಸಬೇಕಾಗುತ್ತದೆ. ಮೂಲ ಕಥೆಯಲ್ಲಿ

ಸಂಕಲನ ಮಾಡುವುದು, ರೂಪಾಂತರಿಸುವುದು, ಸಂಕ್ಷೇಪಿಸುವುದಕ್ಕೆ ತಜ್ಞರ ನೆರವು ಇಲ್ಲಿ ಅಗತ್ಯ.

- ಪಡುವಲುಪಾಯ ಯಕ್ಷಗಾನವು ಮೇಲ್ವರ್ಗಗಳ ಕೈಗೆ ಸಿಕ್ಕು, ಮೇಲ್ಜಾತಿಯವರ ಕೃಪಾಪೋಷಣೆ ಹೊಂದಿ, ಸರಕಾರಗಳ ಸಹಕಾರವನ್ನು ಪಡೆದು ಅದು ಹೇಗೋ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತು.
- ಶಿವರಾಮ ಕಾರಂತರಂತಹ ಪ್ರತಿಭಾನ್ವಿತರು ಯಕ್ಷಗಾನಕ್ಕೆ ಕಾಯಕಲ್ಪವನ್ನು ಕೊಟ್ಟು ಬೆಳೆಸಿದರು. ಯಕ್ಷಗಾನ ಮಂಡಳಿಗಳು ಕರಾವಳಿ ಕರ್ನಾಟಕದುದ್ದಕ್ಕೂ ಈಗಲೂ ಜನಪ್ರಿಯವಾಗಿವೆ. ದಕ್ಷಿಣೋತ್ತರ ಜಿಲ್ಲೆಗಳ ಅಕ್ಷರಸ್ಥರು ಯಕ್ಷಗಾನದಲ್ಲಿ ಆಸಕ್ತಿಹೊಂದಿ ಹಲವಾರು ಮಾರ್ಪಾಡುಗಳೊಂದಿಗೆ ಆ ಕಲೆಯನ್ನು ಸದೃಢವಾಗಿ ಬೆಳೆಸಿದರು.
- ಅಪಾರವಾದ ಯಕ್ಷಗಾನ ಪ್ರೇಮಿಗಳ ಪ್ರೇಕ್ಷಕವೃಂದ ಹಳ್ಳಿ ಮತ್ತು ಪಟ್ಟಣಗಳಲ್ಲಿ ಯಕ್ಷಗಾನ ಕಲಾ ಪ್ರಕಾರಕ್ಕೆ ಬೆಂಬಲವಾಗಿ ನಿಂತಿತು. ಧರ್ಮಸ್ಥಳದಂತಹ ಧಾರ್ಮಿಕ ಕ್ಷೇತ್ರಗಳೂ ಯಕ್ಷಗಾನಕ್ಕೆ ಬೆಂಗಾವಲುಗಳಾದವು.
- ಮೇಲ್ಜಾತಿ, ಧರ್ಮ, ಧರ್ಮಪೀಠ, ವಿದ್ಯಾವಂತರು, ಬುದ್ಧಿಜೀವಿಗಳು ಹಾಗೂ ಸರಕಾರದ ಬೆಂಬಲದಿಂದಾಗಿ ಪಡುವಲುಪಾಯ ಯಕ್ಷಗಾನ ಕಲಾ ಪ್ರಕಾರವು ತನ್ನ ಸಮೃದ್ಧತೆಯನ್ನು ಕಾಯ್ದುಕೊಂಡಿದೆ. ಆದರೆ ಈ ಭಾಗ್ಯ ಮೂಡಲಪಾಯ ಬಯಲಾಟಕ್ಕಿರಲಿಲ್ಲ.
- ಮೊದಲು ಒಂದೊಂದು ಊರುಗಳಲ್ಲೂ ಎರಡು ಮೂರು ಹವ್ಯಾಸಿ ಬಯಲಾಟ ತಂಡಗಳು ಹುಟ್ಟಿ ಪೈಪೋಟಿಯ ಮೇಲೆ ನಾಟಕಗಳನ್ನು ಕಟ್ಟಲಾಗುತ್ತಿತ್ತು. ಊರ ಜಾತ್ರೆ, ಹಬ್ಬ ಹರಿದಿನಗಳಂದು ಊರವರಿಂದಲೇ ಬಯಲಾಟಗಳು ನಿರ್ಮಾಣಗೊಂಡು ಸಂಭ್ರಮದಿಂದ ಪ್ರದರ್ಶನಗೊಳ್ಳುತ್ತಿದ್ದವು.
- ಬಯಲಾಟಗಳು ಗ್ರಾಮಗಳ ಆಚರಣೆಗಳ ಭಾಗವಾಗಿಯೇ ಬೆಳೆದಿದ್ದವು. ಗ್ರಾಮೀಣ ಪ್ರದೇಶಗಳ ಅಶಿಕ್ಷಿತ ಶ್ರಮಿಕ ವರ್ಗಗಳ ಭಾಗವಾಗಿಯೇ ಉಳಿದ ಈ ಬಯಲಾಟಗಳು ಕಂಪನಿ ನಾಟಕಗಳ ಹಾವಳಿಯಿಂದ ಒಂದಿಷ್ಟು ಹಿನ್ನಡೆಯನ್ನು ಅನುಭವಿಸಿತು. ತದನಂತರ ನೆರೆ ಬರಗಳಿಂದ ಕಂಗೆಟ್ಟ ಹಳ್ಳಿಗಳಲ್ಲಿ ಆರ್ಥಿಕ ಸಮಸ್ಯೆಗಳುಂಟಾಗಿ ಯುವಕರು ಕೆಲಸ ಹುಡುಕಿಕೊಂಡು ನಗರಗಳಿಗೆ ವಲಸೆ ಹೋಗಿದ್ದರಿಂದ ಬಯಲಾಟಕ್ಕೆ ಯುವ ಪ್ರತಿಭೆಗಳ ಕೊರತೆಯುಂಟಾಯಿತು. ಬುದ್ಧಿಜೀವಿಗಳು ಬಯಲಾಟಗಳನ್ನು ಡಾಕ್ಟರೇಟ್ ಮಾಡಲು ಆಕರವಾಗಿ ಬಳಸಿಕೊಂಡರೇ ಹೊರತು ಬಯಲಾಟದ ಬದಲಾವಣೆಗೆ, ಅಭಿವೃದ್ಧಿಗೆ ಶಿವರಾಮ ಕಾರಂತರಂತೆ ಶ್ರಮವಹಿಸಲಿಲ್ಲ. ನಗರೀಕರಣ, ಜಾಗತೀಕರಣಗಳು ಹಾಗೂ ಸರಕಾರಗಳ ವಿವೇಚನಾ ರಹಿತ ಯೋಜನೆಗಳು ಹಳ್ಳಿಗಳನ್ನು ಅತಂತ್ರಗೊಳಿಸಿದವು. ಆಧುನಿಕ ದೃಶ್ಯ ಮಾಧ್ಯಮಗಳು ದೇಸಿ ಕಲೆಗಳನ್ನು ಆಪೋಷಣ ತೆಗೆದುಕೊಳ್ಳತೊಡಗಿತು.
- ಟಿವಿ ಮತ್ತು ಸಿನೆಮಾ ಮಾಧ್ಯಮಗಳೂ ಸಹ ಗ್ರಾಮೀಣ ಪ್ರೇಕ್ಷಕವರ್ಗವನ್ನು ಆಕ್ರಮಿಸಿಕೊಂಡಿತು. 'ಈಕಡೆ ಬಯಲಾಟ ಮಾಡುವವರೂ ಇಲ್ಲಾ, ಮಾಡಿದರೆ ನೋಡುವವರೂ ಇಲ್ಲ' ಎನ್ನುವ ಹಂತಕ್ಕೆ ನಮ್ಮ ಜಾನಪದ ಕಲೆ ನಿತ್ರಾಣಗೊಂಡಿತು. ಈ ಎಲ್ಲಾ ಕಾರಣಗಳಿಂದಾಗಿ ಬಯಲಾಟ ಕಲಾ ಪರಂಪರೆ ನಿಧಾನವಾಗಿ ನೇಪಥ್ಯಕ್ಕೆ ಸರಿಯತೊಡಗಿತು. ಈಗಲೂ ಅಲ್ಲಲ್ಲಿ ಅಳಿದುಳಿದ ಬಯಲುಸೀಮೆಯ ಕೆಲವು ಭಾಗಗಳಲ್ಲಿ ಅಪರೂಪಕ್ಕೆಂಬಂತೆ ಇರುವ ಬಯಲಾಟದ ಕಥೆಗಾರರು, ಹಾಡುಗಾರರು

ಹಾಗೂ ಸಂಗೀತಗಾರರ ಕೊನೆಯ ತಲೆಮಾರು ಮುಗಿದುಹೋದರೆ ಮುಂದಿನ ತಲೆಮಾರಿಗೆ ಬಯಲಾಟವನ್ನು ತೆಗೆದುಕೊಂಡು ಹೋಗುವ ಸಾಧ್ಯತೆಗಳು ತುಂಬಾ ಕ್ಷೀಣವಾಗಿವೆ.

- ಹಿರಿಯ ಕಲಾವಿದರಿಗೆ ಕಲೆಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ಕೊರತೆಯಿಂದ ಬಯಲಾಟದ ಕಲೆಗಳು ಅವನತಿಯ ಅಂಚಿನಲ್ಲಿವೆ. ಇವುಗಳ ಬಗ್ಗೆ ಸ್ಪಷ್ಟವಾದ ಮಾಹಿತಿ ನೀಡಬೇಕಾಗಿದೆ. ರಂಗ ಕಲೆಗಳ ಬಗ್ಗೆ ಕೆಲವರು ಪ್ರಬಂಧ ಬರೆಯುತ್ತಾರೆಯೇ ಹೊರತು ಇದರ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡುತ್ತಿಲ್ಲ. ಬಯಲಾಟ ಕಲೆಯು ಕೇವಲ ಆಟವಲ್ಲ ಅದೊಂದು ಸಂಗೀತದ ಪ್ರಕಾರವಾಗಿದೆ. ಅದು ಕೇವಲ ಗ್ರಾಮೀಣ ಕಲೆಯಲ್ಲ, ಅದನ್ನು ನಗರ ಪ್ರದೇಶಗಳಲ್ಲಿಯೂ ಆಡುವಂತೆ ನೋಡಿಕೊಳ್ಳಬೇಕು. ಬಯಲಾಟದ ಕಲಾವಿದರು ಅನಕ್ಷರಸ್ಥರಾಗಿದ್ದು, ಯಾವುದೇ ತರಹದ ಸಂಗೀತದ ಜ್ಞಾನವಿಲ್ಲ. ಆದರೂ ಎಲ್ಲಾ ರಾಗಗಳನ್ನು ಗುರುತಿಸಬಲ್ಲರು. ಹಿರಿಯ ಕಲಾವಿದರ ಕಲಾ ಶ್ರೀಮಂತಿಕೆಯನ್ನು ಸದುಪಯೋಗ ಪಡಿಸಿಕೊಂಡು ಮುಂದಿನ ಪೀಳಿಗೆಗೆ ಕೊಡಬೇಕಾಗಿರುವುದು ಎಲ್ಲರ ಜವಾಬ್ದಾರಿಯಾಗಿದೆ. ಹೀಗೆ ಗ್ರಾಮೀಣ ಪ್ರದೇಶದಲ್ಲಿ ಬಯಲಾಟವು ಎದುರಿಸುತ್ತಿರುವ ಸವಾಲುಗಳನ್ನು ನಿವಾರಿಸಲು ಪರಿಹಾರಗಳನ್ನು ಕಂಡುಕೊಂಡಾಗ ಮಾತ್ರ ಬಯಲಾಟವು ಜನಪದರ ಆಟವಾಗಿ ಉಳಿಯಲು ಸಾಧ್ಯವಿದೆ.

ಕಳೆದ ಶತಮಾನದ ಮಧ್ಯಭಾಗದವರೆಗೂ ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಶ್ರಮಸಂಸ್ಕೃತಿಯ ಪ್ರತೀಕವಾಗಿ ಹುಟ್ಟಿ ಬೆಳೆದು ವಿಜೃಂಭಿಸಿದ್ದು ಬಯಲಾಟ'. ಕಂಪನಿ ನಾಟಕಗಳು ಕರ್ನಾಟಕದ ರಂಗಭೂಮಿಯನ್ನು ಆಪೋಷನ ತೆಗೆದುಕೊಳ್ಳುವ ಮೊದಲು ಇಡೀ ಕರ್ನಾಟಕವನ್ನು ಗ್ರಾಮೀಣ ಜನರ ಮನರಂಜನೆಯ ಮಾಧ್ಯಮವಾಗಿ ಆಳಿದ್ದು ಬಯಲಾಟ ಕಲಾಪ್ರಕಾರಗಳು. ಸಿದ್ಧರಂಗಮಂದಿರಗಳಿಲ್ಲದೇ ಬಯಲಿನಲ್ಲೇ ತಾತ್ಕಾಲಿಕ ವೇದಿಕೆಗಳನ್ನು ನಿರ್ಮಿಸಿ ಆಟಗಳನ್ನು ಪ್ರದರ್ಶಿಸುತ್ತಿದ್ದುದರಿಂದ ಈ ಜಾನಪದ ಕಲೆಗಳಿಗೆ ಬಯಲಾಟ' ಎಂದು ಹೆಸರು ಜನಜನಿತ. ಹೀಗೆ ಬಯಲಲ್ಲಿ ಆಡುವ ಆಟಗಳು ಒಂದೆರಡಲ್ಲ. ಅನೇಕ ಪ್ರಕಾರಗಳಿವೆ. ಅವುಗಳಲ್ಲಿ ಮುಖ್ಯವಾದವುಗಳು ಮೂಡಲಪಾಯ ಮತ್ತು ಪಡುವಲುಪಾಯ. ಈ ಎರಡೂ ಪ್ರಮುಖ ಜಾನಪದ ಪ್ರದರ್ಶಕ ಕಲಾಪ್ರಕಾರಗಳು ಕರ್ನಾಟಕವನ್ನು ಪ್ರಾದೇಶಿಕವಾಗಿ ಹಂಚಿಕೊಂಡಿವೆ. ಆಯಾ ಭಾಗದ ಕೃಷಿ ಮತ್ತು ಕ್ರಿಯಾಮೂಲದ ಅಗತ್ಯಕ್ಕೆ ತಕ್ಕಂತೆ ಭಿನ್ನವಾಗಿ ಬೆಳವಣಿಗೆ ಹೊಂದಿವೆ. ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ಮತ್ತು ಶಿವಮೊಗ್ಗ ಚಿಕ್ಕಮಂಗಳೂರು ಜಿಲ್ಲೆಗಳ ಕೆಲ ಭಾಗದಲ್ಲಿ 'ಪಡುವಲುಪಾಯ ಬಯಲಾಟ' ಪ್ರಸಿದ್ಧಿಯನ್ನು ಪಡೆಯಿತು. ಇದಕ್ಕೆ ಯಕ್ಷಗಾನ ಬಯಲಾಟ ಎಂದು ಹೆಸರಾಯಿತು. ಅದೇ ರೀತಿ ಮಧ್ಯ ಕರ್ನಾಟಕ, ಉತ್ತರ ಕರ್ನಾಟಕ, ಹೈದರಾಬಾದ ಕರ್ನಾಟಕ, ಬಾಂಬೆ ಕರ್ನಾಟಕ ಭಾಗಗಳಲ್ಲಿ ಮೂಡಲಪಾಯ ಬಯಲಾಟಗಳು ತುಂಬಾ ಜನಪ್ರಿಯವಾಗಿದ್ದವು. ಮೂಡಲಪಾಯ ಬಯಲಾಟದಲ್ಲಿ ದೊಡ್ಡಾಟ, ಸಣ್ಣಾಟ, ಶ್ರೀಕೃಷ್ಣ ಪಾರಿಜಾತ, ರಾಧಾನಾಟ, ಅಟ್ಟದಾಟ, ಘಟ್ಟದಕೋರೆ..ಮುಂತಾದ ಪ್ರಕಾರಗಳು ಚಾಲ್ತಿಯಲ್ಲಿದ್ದವು. ಈಗಲೂ ಅಲ್ಲಲ್ಲಿ ಪಳೆಯುಳಿಕೆಗಳಂತೆ ಇವೆ.

**ಪರಾಮರ್ಶನ ಗ್ರಂಥಗಳು:**

1. ಶ್ರೀರಂಗ (ಸಂ.), (1987), ಕನ್ನಡ ರಂಗಭೂಮಿ ನಡೆದು ಬಂದ ದಾರಿ, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್.
2. ರಾಮನಾಥ್ ಹೆಚ್. ಕೆ., (1990), ಕನ್ನಡ ರಂಗಭೂಮಿಯ ವಿಕಾಸ, ಮೈಸೂರು: ಅಭಿನಯ.
3. ಶಿವರುದ್ರಪ್ಪ ಜಿ. ಎಸ್., (2012), ಕನ್ನಡ ನಾಟಕ ಪರಂಪರೆ ಮತ್ತು ಪ್ರಯೋಗ, ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.
4. ಕರಿಶೆಟ್ಟಿ ರುದ್ರಪ್ಪ, ಬಯಲಾಟ ಸಂಕ್ಷಿಪ್ತ ಚರಿತ್ರೆ ಮತ್ತು ಪದಗಳು, ಕೊಂಬಳಿ (ಬಳ್ಳಾರಿ): ಏಕಪರ್ಣ ಪ್ರಕಾಶನ.
5. ಬೋರಲಿಂಗಯ್ಯ ಹಿ. ಚಿ., (1996), ಕರ್ನಾಟಕ ಜಾನಪದ ಕಲೆಗಳ ಕೋಶ, ಹಂಪಿ: ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
6. ಚನ್ನಬಸಪ್ಪ ಗೋ. ರು., (1977), ಕರ್ನಾಟಕ ಜನಪದ ಕಲೆಗಳು, ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು.